**ಸಿ.ಸಿ. 645/2021, ಪಿ.ಡಬ್ಲ್ಯೂ-6 ಹೆಸರುಃ**

**ದಿಃ18-07-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಸಾಕ್ಷಿ ಅಬಕಾರಿ ಇಲಾಖೆಯವರು ತಯಾರಿಸಿದ ದೃಡೀಕೃತ ಪ್ರತಿಯ ವರದಿಯಲ್ಲಿನ ತನ್ನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ನಾನು ಹೊಳಲ್ಕೆರೆಯ ಅಂಚೆ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಮ್ಮ ಇಲಾಖೆಯ ಮೇಲಾಧಿಕಾರಿಯಾದ ಚಾಸಾ.1 ರವರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಚಾಸಾ.1 ರವರ ಸೂಚನೆಯ ಮೇರೆಗೆ ನಾನು ನಿಪಿ.3 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ.3 ಕ್ಕೆ ಯಾವ ಕಾರಣಕ್ಕಾಗಿ ಸಹಿ ಪಡೆದಿರುತ್ತಾರೆಂದು ಗೊತ್ತಿಲ್ಲ. ಚಾಸಾ.1 ರವರು ನನ್ನ ಮೇಲಾಧಿಕಾರಿಯಾದ ಕಾರಣ ನಿಪಿ.3 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನನ್ನೊಂದಿಗೆ ಚಾಸಾ.11 ರವರು ಸಹಿ ಮಾಡಿರುತ್ತಾರೆ. ನಾನು ಸದರಿ ದಾಖಲಾತಿಗೆ ಸಹಿ ಮಾಡಿದಾಗ ಮದ್ಯಾಹ್ನ 1 ಗಂಟೆ ಆಗಿತ್ತು. ನನ್ನ ಸಮಕ್ಷಮದಲ್ಲಿ ಯಾವುದೇ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ನಿಪಿ.4 ರಿಂದ 12 ರ ದಾಖಲಾತಿಗಳನ್ನು ನಾನು ಈ ಮೊದಲು ನೋಡಿಲ್ಲ ಮತ್ತು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ದಿನಾಂಕ 17.08.2005 ರಂದು ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಆರೋಪಿತನ ವಿರುದ್ಧದ ದೂರಿನ ಕುರಿತಾಗಿ ಚಾಸಾ.1 ರವರು ನನ್ನ ಮತ್ತು ಚಾಸಾ.11 ರವರ ಸಮಕ್ಷಮ 36 ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡಿದ್ದು, ಸದರಿ ಸಮಯದಲ್ಲಿ ನಾನು ನಿಪಿ.3 ರ

ಮಹಜರಿಗೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಹಜರಿನ ಸಮಯದಲ್ಲಿ ಉಪಸ್ಥಿತನಿದ್ದಾಗ್ಯೂ ಆರೋಪಿತನು ನಮ್ಮ ಇಲಾಖೆಗೆ ಸೇರಿದ ನೌಕರನಾಗಿದ್ದ ಕಾರಣ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ- ಇಲ್ಲ**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಳಲ್ಕೆರೆ